## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** M/s Gamesa Renewable Private Limited ಕಂಪನಿಗೆ ರಾಯಚೂರು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 64 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಕ್ರಮ ಸಂಖ್ಯೆ: (1) ರ 30 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Latur Renewable Private Limited ಕಂಪನಿಗೆ ವರ್ಗಾವಣೆ ಮಾಡಿ, ತದನಂತರ 30 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 60 ಮೆ.ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಇಎನ್ 107 ಎನ್‌ಸಿಇ 2016, ದಿನಾಂಕ: 22.07.2016
2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಏಕ ಕಡತ ಸಂಖ್ಯೆ : KREDL/08/LRPL-60MW(GRPL-60MW/Gudenhal/Raichur/2017/1530-L.

* * *

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ M/s Gamesa Renewable Private Limited ಕಂಪನಿಯವರು ರಾಯಚೂರು ಜಿಲ್ಲೆಯ, ಲಿಂಗಸಗೂರು ತಾಲ್ಲೂಕಿನ Gudenhal, Madrainakota, Kuppogidda, Medinapur And Hotti ಗ್ರಾಮಗಳಲ್ಲಿ 30 ಮೆ.ವ್ಯಾ., ಮಾನ್ವಿ ಮತ್ತು ದೇವದುರ್ಗ ತಾಲ್ಲೂಕಿನ Shavantgal, Kasamdoddi, Wadvatti, Narbanda, Murkigudda & Rekalmardi ಗ್ರಾಮಗಳಲ್ಲಿ 24 ಮೆ.ವ್ಯಾ. ಮತ್ತು ಲಿಂಗಸುಗೂರು ತಾಲ್ಲೂಕಿನ Nirloti, Advibhavi, Thirthibhavi, Moildini and Saltampur ಗ್ರಾಮಗಳಲ್ಲಿ 10 ಮೆ.ವ್ಯಾ. ಸೇರಿ ಒಟ್ಟು 64 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿತ್ತು

ಮೇಲೆ ಓದಲಾದ ಕ್ರಮ ಸಂಖ್ಯೆ:(2) ರನ್ವಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ಏಕ ಕಡತ ಪದ್ಧತಿಯಡಿಯಲ್ಲಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Gamesa Renewable Private Limited ಕಂಪನಿಗೆ ರಾಯಚೂರು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 64 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಕ್ರಮ ಸಂಖ್ಯೆ: (1)ರಲ್ಲಿ ರಾಯಚೂರು ಜಿಲ್ಲೆಯ, ಲಿಂಗಸಗೂರು ತಾಲ್ಲೂಕಿನ Gudenhal, Madrainakota, Kuppogidda, Medinapur And Hotti ಗ್ರಾಮಗಳಲ್ಲಿ ಹಂಚಿಕೆಯಾಗಿರುವ 30 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Latur Renewable Private Limited ಕಂಪನಿಗೆ ವರ್ಗಾವಣೆ ಮಾಡಿ, ತದನಂತರ 30 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 60 ಮೆ.ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಅಭಿವೃದ್ಧಿದಾರರು ಮನವಿ ಮಾಡಿರುತ್ತಾರೆ. ಸದರಿ ವರ್ಗಾವಣೆ ಮತ್ತು ಸಾಮರ್ಥ್ಯವನ್ನು ವೃದ್ಧಿಸುವುದಕ್ಕೆ ಎರಡೂ ಕಂಪನಿಗಳು ಸಹಮತಿ ನೀಡಿದ್ದು,

....2

M/s Gamesa Renewable Private Limited ಕಂಪನಿಯವರು M/s Latur Renewable Private Limited ಕಂಪನಿಯು 60 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ Corporate Guarantee ಯನ್ನು ಛಾಪ ಕಾಗದದ ಮೂಲಕ ನೀಡಿರುತ್ತಾರೆ. ಸದರಿ ವರ್ಗಾವಣೆಗೆ ಸಂಬಂಧಿಸಿದ ತಾಂತ್ರಿಕ ವಿವರಗಳು, ಸ್ಥಳದ ಮಾಹಿತಿ, ಅಕ್ಷಾಂಶ ಮತ್ತು ರೇಖಾಂಶ, ಇನ್ನಿತರೆ ವಿವರಗಳನ್ನು ಸಲ್ಲಿಸಿರುತ್ತಾರೆ. M/s Gamesa Renewable Private Limited ಕಂಪನಿಗೆ ರಾಯಚೂರು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 64 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಕ್ರಮ ಸಂಖ್ಯೆ: (1)ರಲ್ಲಿ ರಾಯಚೂರು ಜಿಲ್ಲೆಯ, ಲಿಂಗಸಗೂರು ತಾಲ್ಲೂಕಿನ Gudenhal, Madrainakota, Kuppogidda, Medinapur And Hotti ಗ್ರಾಮಗಳಲ್ಲಿ ಹಂಚಿಕೆಯಾಗಿರುವ 30 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Latur Renewable Private Limited ಕಂಪನಿಗೆ ವರ್ಗಾವಣೆ ಮಾಡಿ, ತದನಂತರ 30 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 60 ಮೆ.ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಎನ್ 213 ಎನ್‌ಸಿಇ 2017,**

**ಬೆಂಗಳೂರು, ದಿನಾಂಕ: 09.05.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಸರ್ಕಾರದ ಆದೇಶ ಸಂಖ್ಯೆ: ಇಎನ್ 107 ಎನ್‌ಸಿಇ 2016, ದಿನಾಂಕ: 22.07.2016 ರಲ್ಲಿ M/s Gamesa Renewable Private Limited ಕಂಪನಿಗೆ ರಾಯಚೂರು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 64 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಕ್ರಮ ಸಂಖ್ಯೆ: (1)ರಲ್ಲಿ ರಾಯಚೂರು ಜಿಲ್ಲೆಯ, ಲಿಂಗಸಗೂರು ತಾಲ್ಲೂಕಿನ Gudenhal, Madrainakota, Kuppogidda, Medinapur And Hotti ಗ್ರಾಮಗಳಲ್ಲಿ ಹಂಚಿಕೆಯಾಗಿರುವ 30 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Latur Renewable Private Limited ಕಂಪನಿಗೆ ವರ್ಗಾವಣೆ ಮಾಡಿ, ತದನಂತರ 30 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 60 ಮೆ.ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಹೆಚ್ಚಿಸಿ ಆದೇಶಿಸಲಾಗಿದೆ.

....3

Schedule

**Geographical area description for 60 MW capacity wind power project**

| Sl. No. | Toposheet No. | Near by villages of the proposed area and district. | Geographical area description of the project | Sanctioned capacity in MW | Enhancement proposed in MW | Total capacity in MW |
|---|---|---|---|---|---|---|
| 1 | 56 D/12 | Gudenhal, Madrainakota ,Honhalli, Kalapur, Lingsugur, Sarjapur, Lingsugur HT, Aidnal, Yalgaldinni, Yardoni, Devarbhupur, Kuppigudda and Medinapur, Hatti Lingsugur taluk, Raichur district. | The identified area is covered in Hatti near Lingsugur. The identified area is surrounded by points A, B, C, D, E & F and are held in the following Geographical co-ordinates as:<br>**Point A**:Lat:16°6'34.92"N, Long: 76°31'55.2"E<br>**Point B**:Lat:16°11'20.76"N, Long: 76°31'47.28"E<br>**Point C**:Lat:16°11'25.08"N, Long: 76°35'0.08"E<br>**PointD**:Lat:16°15'0"N Long:76°35'0"E<br>**PointE**:Lat:16°15'0"N Long:76°39'35.42"E<br>**PointF**:Lat:16°10'11.85"N Long:76°39'36.54"E<br>**Peaks:** 511, 521, 536, 522, 527, 547, 571 & 541 m AMSL. | 30 MW (15 Nos x 2000 kW) | 30 MW (15 Nos x 2000 kW) | 60 MW (30 Nos x 2000 Kw) |

**ಷರತ್ತು ಮತ್ತು ನಿಬಂಧನೆಗಳು**

1 M/s Latur Renewable Private Limited ರವರು ಸರ್ಕಾರಿ ಆದೇಶ ಸಂಖ್ಯೆ: ಇಎನ್ 435 ಎನ್‌ಸಿಇ 2011 ದಿನಾಂಕ 06.1.2012 ರನ್ವಯ 45 ದಿನಗಳ ಒಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 M/s Latur Renewable Private Limited ರವರು ಸದರಿ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಇಎನ್ 107 ಎನ್‌ಸಿಇ 2016, ದಿನಾಂಕ: 22.07.2016 ರಲ್ಲಿ ನಿಗಧಿಪಡಿಸಿರುವ ಕಾಲಾವಧಿಯಂತೆ ಅನುಷ್ಠಾನಗೊಳಿಸತಕ್ಕದ್ದು.

3 M/s Latur Renewable Private Limited ರವರು ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ತನ್ನು ಮಾರಾಟ ಮಾಡುವ ಕುರಿತು ಯೋಜನಾ ಅನುಷ್ಠಾನ ಪ್ರದೇಶದಲ್ಲಿನ ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಯೊಂದಿಗೆಯೇ ವಿದ್ಯುತ್ ಖರೀದಿ ಒಡಂಬಡಿಕೆಯನ್ನು ಮಾಡಿಕೊಳ್ಳಲು / ಕೆ.ಪಿ.ಟಿ.ಸಿ.ಎಲ್.ನೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆಯನ್ನು ಮಾಡಿಕೊಳ್ಳಲು / ಸ್ವಂತ ಬಳಕೆ ಮಾಡಿಕೊಳ್ಳಲು / ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಅನುಮತಿಸಲಾಗಿದೆ.

4 M/s Latur Renewable Private Limited ರವರು ಯೋಜನೆಗೆ ಸಂಬಂಧಿಸಿದಂತೆ ನಿಯಮಾನುಸಾರ ಪಾವತಿಸಬೇಕಾಗಿರುವ ಎಲ್ಲಾ ತರಹದ ಶುಲ್ಕಗಳನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು.

....4